# ಭಾರತೀಯ ಕಾವ್ಯಮೀಮಾಂಸೆ

| | |
|---|---|
| **Programme** | ದ್ವಿತೀಯ ಬಿ.ಎ |
| **Subject** | ಕನ್ನಡ  ಐಚ್ಛಿಕ |
| **Semester** | ಮೂರನೆಯ ಚತುರ್ಮಾಸ |
| **University** | ಮೈಸೂರು ವಿಶ್ವವಿದ್ಯಾನಿಲಯ |
| **Session** | ಕಾವ್ಯ – ಸ್ವರೂಪ- ಲಕ್ಷಣಗಳು. |

Welcome

# ಭಾರತೀಯ ಕಾವ್ಯಮೀಮಾಂಸೆ

**ಉಪಶೀರ್ಷಿಕೆ :** ಕಾವ್ಯ-ಸ್ವರೂಪ ಲಕ್ಷಣ

# ಕಲಿಕೆಯ ಉದ್ದೇಶಗಳು

- ಕಾವ್ಯ  ಎಂಬುದರ ಬಗೆಗೆ ತಿಳಿವಳಿಕೆ ಮೂಡಿಸುವುದು.
- ಕಾವ್ಯದ ಸ್ವರೂಪ, ಲಕ್ಷಣಗಳನ್ನು ಪರಿಚಯಿಸುವುದು.
- ಕಾವ್ಯ ಎಂಬುದರ ಬಗೆಗೆ ಭಾರತೀಯ ಮತ್ತು ಪಾಶ್ಚಾತ್ಯ ಮೀಮಾಂಸಕರ ವ್ಯಾಖ್ಯಾನ,ಚಿಂತನೆಗಳನ್ನು ತಿಳಿಸುವುದು.

# ಅವಧಿಯ ಫಲಿತಗಳು

❖ ಭಾರತೀಯ ಕಾವ್ಯ ಮೀಮಾಂಸೆಯಯಲ್ಲಿ ಕಾವ್ಯದ ಸ್ವರೂಪ - ಲಕ್ಷಣಗಳನ್ನು ತಿಳಿದುಕೊಳ್ಳುವರು.

❖ ಭಾರತೀಯ ಮತ್ತು ಪಾಶ್ಚಾತ್ಯ ಮೀಮಾಂಸಕರ ದೃಷ್ಠಿಯಲ್ಲಿ ಕಾವ್ಯದ ಬಗೆಗಿನ ವ್ಯಾಖ್ಯಾನಗಳನ್ನು ಅರಿಯುವರು.

# ಕಾವ್ಯ ಎಂದರೇನು...?

❖ ಕಾವ್ಯ ಎಂದರೇನು ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟಸಾಧ್ಯ. ಪ್ರಪಂಚದ ಅನೇಕ ವಿದ್ವಾಂಸರು , ತತ್ವಜ್ಞಾನಿಗಳು, ವಿಮರ್ಶಕರು, ಕವಿಗಳು...ಈ ಕುರಿತು ಸಾಕಷ್ಟು ಜಿಜ್ಞಾಸೆ, ಚರ್ಚೆ ನಡೆಯಿಸಿದ್ದರೂ ಇಂದಿಗೂ ಸರ್ವ ಸಮ್ಮತವಾದ ಉತ್ತರವನ್ನು ಕೊಡಲು ಸಾಧ್ಯವಾಗಿಲ್ಲ.

❖ಇದಕ್ಕೆ ಕಾರಣ ಕಾವ್ಯದ ವಸ್ತುಸ್ಥಿತಿ ನಿಗೂಢ ಸ್ವರೂಪವೇ ಆಗಿದೆ.

# ಕಾವ್ಯ ಎಂದರೇನು...?

- ಭಾರತೀಯ ಕಾವ್ಯ ಮೀಮಾಂಸೆಯ ಪ್ರಾಚೀನ ಪರಂಪರೆಯಲ್ಲಿ ಈ ಪದವನ್ನು ವ್ಯಾಪಕವಾದ ಅರ್ಥದಲ್ಲಿ ಬಳಸಲಾಗಿದೆ. ‘ಕಾವ್ಯೇಷು ನಾಟಕಂ ರಮ್ಯಂ’ ಎಂಬ ಭರತಮುನಿಯ ಮಾತು ಇದನ್ನೇ ಸಮರ್ಥಿಸುತ್ತದೆ.

- ಸಾಹಿತ್ಯದ ಸರ್ವ ಪ್ರಕಾರವನ್ನೊಳಗೊಳ್ಳಬಲ್ಲ ಇಂಗ್ಲೀಷಿನ ‘Literature’ ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿತ್ತು.ಆದರೆ ಇಂದು ಆಧುನಿಕ ಕಾಲದಲ್ಲಿ ಕೇವಲ ಸಾಹಿತ್ಯ ಪ್ರಕಾರದಲ್ಲೊಂದಾದ ಕವಿತೆ ಎಂಬ ಸೀಮಿತ ಅರ್ಥದಲ್ಲಿ ಪ್ರಚಲಿತವಾಗಿದೆ.

# ಭಾರತೀಯ ಕಾವ್ಯ ಮೀಮಾಂಸಕರ ದೃಷ್ಟಿಯಲ್ಲಿ ಕಾವ್ಯ ನಿಷ್ಪತ್ತಿ:-

- "ಕಾವ್ಯ" ಎಂಬುದು ಸಂಸ್ಕೃತದ ಮೂಲಧಾತು "ಕವೃ" ಎಂಬುದರಿಂದ ನಿಷ್ಪನ್ನವಾಗಿದೆ. 'ಕವೃ' ಎಂದರೆ 'ವರ್ಣನೆ' ಎಂದರ್ಥ.
ಕಾವ್ಯ ವರ್ಣಿಸುವಂತಹ ಸ್ವರೂಪವುಳ್ಳದ್ದು.

# ಕಾವ್ಯದ ಸಾಮಾನ್ಯ ಅರ್ಥ

❖ ಭಾಷೆಯ ಕಲಾತ್ಮಕವಾದ ಪರಮಸಿದ್ಧಿಯ ಬರೆವಣಿಗೆಯ ರೂಪವೇ ಕಾವ್ಯ.

❖ ರಸಾತ್ಮಕವಾದ ಬರೆವಣಿಗೆಯೇ ಕಾವ್ಯ.
ಶಬ್ದ ಶರೀರದಲ್ಲಿ ಅರ್ಥ ಸತ್ವದ ಬರೆವಣೆಗೆಯೇ ಕಾವ್ಯ.

❖ ವಾಚ್ಯವಿದ್ದರೂ ಸೂಚ್ಯವಾದ ಬರೆವಣಿಗೆಯೇ ಕಾವ್ಯ.
ಬರಿಗಣ್ಣಿಗೆ (ಹಣೆಗಣ್ಣು) ಕಂಡಿರುವುದನ್ನು ಒಳಗಣ್ಣಿನಿಂದ ನೋಡಿ ವರ್ಣಿಸುವುದೇ ಕಾವ್ಯ.

- ರಸಾತ್ಮಕವಾದ ಪದಪುಂಜಗಳ ಸಮೂಹವೇ ಕಾವ್ಯ.
ಕಣ್ಣಿಗೆ ಕಾಣಿಸಿದ್ದನ್ನು ಆತ್ಮಾನಂದವಾಗುವಂತೆ ವರ್ಣಿಸುವುದೇ ಕಾವ್ಯ.

- ‘ಕವಿ’ ‘ಪರಿಸರದ ಕೂಸು’ ಆಗಿರುವುದರಿಂದ ಸಮಾಜದ ಘಟನೆಗಳಿಗೆ ಸ್ಪಂದಿಸಿ ಕಾವ್ಯ ರಚಿಸುತ್ತಾನೆ.

## ಕಾವ್ಯದ ಸ್ವರೂಪ – ರೂಪ ಹೇಗಿರಬೇಕು …?

ಎಂಬುದರ ಬಗೆಗೆ ನಮ್ಮ ಕಾವ್ಯ ಮೀಮಾಂಸಕರ ವಲಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ..

❖ಕಾವ್ಯವು ಅಷ್ಟಾದಶ (ಹದಿನೆಂಟು ವರ್ಣನೆಗಳೆಂದರೆ, ನಗರ, ಅರ್ಣವ,ಶೈಲ, ಋತು,ಚಂದ್ರೋದಯ, ಸೂರ್ಯೋದಯ, ವನವಿಹಾರ, ಜಲಕ್ರೀಡೆ, ಮಧುಪಾನ ವಿನೋದ, ಸುರತೋತ್ಸವ, ವಿಯೋಗ, ವಿವಾಹ, ಕುಮಾರ ಜನನ , ಮಂತ್ರಾಲೋಚನೆ, ದೂತಕಾರ್ಯ, ವಿಜಯಯಾತ್ರೆ,ಯುದ್ಧ, ನಾಯಕನ ವಿಜಯ)

ವರ್ಣನೆಗಳಿಂದ ಕೂಡಿರಬೇಕೆಂಬುದು ನಮ್ಮ ಪ್ರಾಚೀನರ ನಂಬಿಕೆಯಾಗಿತ್ತು.

- ಅಷ್ಟಾದಶ ವರ್ಣನೆಗಳನ್ನು ಕಾವ್ಯದಲ್ಲಿ ಬಳಸಬೇಕೆಂಬ ನಿಯಮವನ್ನು ನಿಯತವಾಗಿ ವರ್ಣಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು .

- ಕವಿ ಅವುಗಳ ಬಳಕೆಯ ಅವಶ್ಯಕತೆ - ಅನವಶ್ಯಕತೆಯನ್ನು ಮುಂದೆ ನಾವು ಪೂರಕ ಪಠ್ಯದಲ್ಲಿರುವ ಔಚಿತ್ಯ ಸಿದ್ಧಾಂತದಲ್ಲಿ ಕಂಡುಬರುವ ಆಯ್ದ ಕಾವ್ಯ ಭಾಗಗಳ ಆಧಾರದಿಂದ ಅರಿಯಬಹುದಾಗಿದೆ.

# ಭಾರತೀಯ ಲಾಕ್ಷಣಿಕರ ದೃಷ್ಟಿಯಲ್ಲಿ ಕಾವ್ಯ

- ಭಾಮಹ :- " ಶಬ್ದಾರ್ಥ ಸಹಿತೌ ಕಾವ್ಯಂ "(ಕಾವ್ಯಾಂಕಾರ ,1-16) ಅಂದರೆ ಶಬ್ದ ಮತ್ತು ಅರ್ಥಗಳಿಂದ ಕೂಡಿದ್ದು ಕಾವ್ಯ ಎನ್ನುತ್ತಾನೆ. ಆ ಶಬ್ದಾರ್ಥಗಳು ವಕ್ರೋಕ್ತಿಯಿಂದ ಕೂಡಿರಬೇಕು, ಕೊಂಕುವೆತ್ತ ನುಡಿಯ ಉದ್ದೇಶ ಪರಮಾನಂದ ಉಂಟುಮಾಡುವುದು. ಎಂಬ ಅವನ ಮಾತುಗಳು ಅಲಂಕಾರಾದಿಗಳಿಂದ ವಿಶಿಷ್ಟವಾದ ಅನುಭವಗಳನ್ನು ತಂದು ಕೊಡುವ ಶಬ್ದ ಮತ್ತು ಅರ್ಥಗಳ ಸಾಹಿತ್ಯವೇ ಕಾವ್ಯ ಎಂದು ಹೇಳುತ್ತಾನೆಂಬುದನ್ನು ನಾವು ಪರಿಭಾವಿಸಬಹುದು.

❖ ದಂಡಿ:- (7ನೇ ಶತಮಾನ, ಕಾವ್ಯಾದರ್ಶ)

❖"ಕಾವ್ಯಂಸ್ಪುರದಲಂಕಾರಃ ಗುಣಾವದೋಷ ವರ್ಜಿತಃ"

  ❖"ಕಾವ್ಯಂಸ್ಫುರದಲಂಕಾರಃ ಗುಣಾವದೋಷ ವರ್ಜಿತಂ"

❖ಅಂದರೆ ಅಲಂಕಾರದಿಂದ ಕೂಡಿದ, ಗುಣ-ಸೌಂದರ್ಯ ದೋಷ ರಹಿತವಾದ ಶಬ್ದಗಳ ಸಮೂಹವೇ ಕಾವ್ಯ.

❖ವಾಮನ :- "ರೀತಿರಾತ್ಮ ಕಾವ್ಯಸ್ಯಃ" ಮತ್ತು

❖ ' ಕಾವ್ಯ ಶೋಭಾಯ ಕರ್ತಾರೋ ಧರ್ಮಗುಣಾಃ' ಎಂಬ ಮಾತುಗಳು ಮುಖ್ಯವಾದವು.

❖ ರೀತಿಯೇ ಕಾವ್ಯದ ಆತ್ಮ ಎನ್ನುತ್ತಾನೆ.

ಅಂದರೆ ಕಾವ್ಯದಲ್ಲಿ ಶಬ್ದ , ಅರ್ಥ, ಗುಣ, ಅಲಂಕಾರ, ರಸ, ಧ್ವನಿ, ರೀತಿ ಪ್ರಮುಖವಾಗಿರಬೇಕು ಎಂಬುದು ಆತನ ಮಾತುಗಳ ಸಾರ.

- ಆನಂದವರ್ಧನ :- “ಕಾವ್ಯಸ್ಯಾತ್ಮ ಧ್ವನಿಃ” ಎನ್ನುವುದರೊಂದಿಗೆ

- “ಸಹೃದಯ ಹೃದಯಹ್ಲಾದಿ ಶಬ್ದಾರ್ಥ ಮಯತ್ವಮೇವ ಕಾವ್ಯ ಲಕ್ಷಣಂ”

ಅರ್ಥಾತ್ ಸಹೃದಯರ ಹೃದಯವನ್ನು ಆಹ್ಲಾದಗೊಳಿಸುವ ಶಬ್ದಾರ್ಥಗಳಿಂದ ಕೂಡಿರುವುದೇ ಕಾವ್ಯ.

➢ಕುಂತಕ :- (ವಕ್ರೋಕ್ತಿ ಜೀವಿತ)

➢ "ಶಬ್ದಾರ್ಥ ಸಹಿತೌ ವಕ್ರಕವಿ ವ್ಯಾಪಾರ ಶಾಲಿನೀ |
ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣೀ ||

➢ಕಾವ್ಯವು ಬಲ್ಲವರಿಗೆ ಆಹ್ಲಾದವನ್ನುಂಟುಮಾಡುವಂತದ್ದು, ವಕ್ರಕವಿ ವ್ಯಾಪಾರದಿಂದ ಕೂಡಿದ್ದ ಅಂತಹ ವ್ಯವಸ್ಥೆಗೊಂಡ ಶಬ್ದಾರ್ಥಗಳು ಒಟ್ಟಾಗಿ ಕಾವ್ಯ ಎನಿಸುತ್ತವೆ. ಎನ್ನುತ್ತಾನೆ. ಜೊತೆಗೆ

➢ 'ಕಾವ್ಯದ ಆತ್ಮ ವಕ್ರೋಕ್ತಿ' ಎಂಬುದರಲ್ಲಿಯೇ ಈತನ ಅಭಿಮತ.

❖ಮಮ್ಮಟ :- “ ತದದೋಷೌ ಶಬ್ದಾರ್ಥೌ ಸಗುಣವನಲಂಕೃತೀ ಪುನಃ ಕ್ವಾಪಿ” ಎಂಬ ಸೂತ್ರದಲ್ಲಿ ಈತ ಹೇಳುವುದೇನೆಂದರೆ, (ತದು ಅಂದರೆ ಅದು ಎಂದರೆ ಕಾವ್ಯ )

❖ ‘ಕಾವ್ಯವು ದೋಷ ರಹಿತವಾದ, ಗುಣ ಸಹಿತವಾದ ಶಬ್ದಾರ್ಥಗಳನ್ನುಳ್ಳದ್ದು, ಇಲ್ಲಿ ಕೆಲವು ವೇಳೆ ಅಲಂಕಾರಗಳಿಲ್ಲದಿರುವುದೂ ಉಂಟು.’ ಅಂದರೆ

❖ ‘ಸಾಮಾನ್ಯವಾಗಿ ಎಲ್ಲೆಡೆಗಳಲ್ಲಿಯೂ ಶಬ್ದಾರ್ಥಗಳು ಅಲಂಕಾರ ಸಹಿತವಾಗಿಯೇ ಇರುತ್ತವೆ; ಎಲ್ಲೋ ಕೆಲವು ಕಡೆಗಳಲ್ಲಿ ಮಾತ್ರ ಸ್ಫುಟವಾದ ಅಲಂಕಾರಗಳಿಲ್ಲದಿದ್ದರೂ ಕಾವ್ಯತ್ವಕ್ಕೆ ಚ್ಯುತಿಯಿಲ್ಲ’ ಎಂದು ಸ್ಪಷ್ಟಪಡಿಸುತ್ತಾನೆ.

- **ವಿಶ್ವನಾಥ :-** ( ಸಾಹಿತ್ಯ ದರ್ಪಣ)

“ವಾಕ್ಯಂ ರಸಾತ್ಮಕಂ ಕಾವ್ಯಂ”

ರಸಾತ್ಮಕವಾದ ವಾಕ್ಯಗಳೇ ಕಾವ್ಯ.
ಈತ ರಸಕ್ಕೆ ಪ್ರಾಮುಖ್ಯತೆಕೊಟ್ಟು ಕಾವ್ಯ ಸೂತ್ರವನ್ನು ನಿರೂಪಿಸುತ್ತಾನೆ.

- **ಅಭಿನವಗುಪ್ತ :-** ಕಾವ್ಯಕ್ಕೆ ಧ್ವನಿಯೇ ಮುಖ್ಯ ಎಂದು ಪ್ರತಿಪಾದಿಸುತ್ತಾ “ಧ್ವನಿಕೆವ ಪ್ರಧಾನ್ಯೇನ ಕಾವ್ಯ ಮಿತಿ ಸ್ಥಿತಂ’ ಎಂದಿದ್ದಾನೆ.

❖ಜಗನ್ನಾಥ ಪಂಡಿತ : -

"ರಮಣಿಯಾರ್ಥಪ್ರತಿಪ್ರಾದಕಃ ಶಬ್ಧಃಕಾವ್ಯಂ"
ರಮಣೀಯಾರ್ಥವನ್ನು ಪ್ರತಿಪಾದಿಸುವ ಶಬ್ದಗಳೇ ಕಾವ್ಯ.
ರಮಣಿಯತೆಯ ಅನುಭವವಿದ್ದರೆ ಸಾಕು ಅದು ಕಾವ್ಯವಾಗುತ್ತದೆ ಎಂಬುದು ಈತನ ದೃಷ್ಟಿ.

➢ಭಾರತೀಯ ಮೀಮಾಂಸಕರ ಮಾತುಗಳನ್ನು ಗಮನಿಸಿದಾಗ ,
ಒಟ್ಟಾರೆ ಕಾವ್ಯ ಎಂದರೇನು ಎಂದು ಗ್ರಹಿಸುವುದಾದರೆ, "ಅಲಂಕಾರಗಳಿಂದ ಶೋಭಿತವಾಗಿಯೂ, ಗುಣಗಳಿಂದ ಕೂಡಿಯೂ, ದೋಷಗಳಿಲ್ಲದೆಯೂ ಇಷ್ಟವಾದ ಅರ್ಥವುಳ್ಳದ್ದಾಗಿಯೂ ಇರುವ ಪದ ಸಮೂಹವೇ ಕಾವ್ಯ" ಎಂಬ ನಿಲುವಿಗೆ ಬರಬಹುದು.

# ಪಾಶ್ಚಾತ್ಯ ಮೀಮಾಂಸಕರ ದೃಷ್ಟಿಯಲ್ಲಿ ಕಾವ್ಯ

❖ ವಿಲಿಯಂ ವರ್ಡ್ಸ್ ವರ್ತ್ :-

" Poetry is the Spontaneous overflow of the powerful feelings" ಅಂದರೆ,

❖ 'ಪ್ರಶಾಂತ ಸಮಯದಲ್ಲಿ ಸ್ಮರಿಸಲ್ಪಟ್ಟ ಉತ್ಕಟ ಭಾವನೆಗಳ ಸಹಜ ಉಕ್ಕುವಿಕೆಯೇ ಕವಿತೆ'

❖ ಅಡ್ಸನ್ :- "ಕಲ್ಪನೆ ಮತ್ತು ಭಾವನೆಯ ಮೂಲಕ ಮಾಡಿದ ಬದುಕಿನ ವ್ಯಾಖ್ಯಾನವೇ ಕವಿತೆ".

- ಶೆಲ್ಲಿ :- **"Poetry is the record of the best and happiest moments of the happiest and best minds... it is as it were the interpretation of a diviner nature through our own"**

- **'ಅತ್ಯಂತ ಉದಾತ್ತವಾದ ಮನಸ್ಸುಗಳ ಅತ್ಯುದಾತ್ತವಾದ ಅನುಭವ ಕ್ಷಣಗಳನ್ನು ಆನಂದಾತ್ಮಕವಾಗಿ ಹಿಡಿದಿಡುವ ಪ್ರಯತ್ನವೇ ಕಾವ್ಯ.'**

**Poetry is the expression of imagination ಎಂಬ ಮಾತನ್ನೂ ಗಮನಿಸಬಹುದು.**

## ❖ ಮ್ಯಾಥ್ಯೂ ಅರ್ನಾಲ್ಡ್ : -

➢ "Poetry is nothing less than the most prefect speech of man that in which he comes nearest to being able to utter the truth"

❖ ಕಾವ್ಯ ಮನುಷ್ಯನ ಭಾವನೆಯ ಅತ್ಯಂತ ಪರಿಪೂರ್ಣ ರೂಪ ಮತ್ತು ಆ ರೂಪದಲ್ಲಿ ಅದು ಸತ್ಯಾನ್ವೇಷಣೆಯ ಅತೀ ಹತ್ತಿರಕ್ಕೆ ಬರುತ್ತದೆ. Poetry is at bottom a Criticism of life ಎಂಬ ಮಾತೂ ಪ್ರಮುಖವಾದದ್ದು.

- ಮ್ಯಾಥ್ಯೂ ಅರ್ನಾಲ್ಡ್ :-

" Poetry is a criticism of life under the Conditions fixed for such a Criticism by the laws of poetic truth and poetic beauty "

- ಕಾವ್ಯ ಸತ್ಯವನ್ನೂ ಕಾವ್ಯ ಸೌಂದರ್ಯದ ಹಿನ್ನೆಲೆಯನ್ನೂಅವಲಂಬಿಸಿದ ಜೀವನ ವಿಮರ್ಶೆಯೇ ಕಾವ್ಯ.

❖ಕಾರ್ಲೈ :- (Carlyle)

"Poetry we will call Musical Thought"

ಸಂಗೀತಮಯ ವಿಚಾರವೇ ಕವಿತೆ.

➢ಜಾನ್ಸನ್ :- ಕವಿತೆಯು ಸತ್ಯ ಮತ್ತು ಆನಂದ (ಭಾವ)ಗಳನ್ನು ಸಮನ್ವಯಗೊಳಿಸುವ ಕಲೆಯಾಗಿದ್ದು ಅದರಲ್ಲಿ ಕಲ್ಪನಾಶಕ್ತಿ ಬುದ್ಧಿಯ ಸಹಾಯಕ್ಕಾಗಿ ಪ್ರಯೋಗಿಸಲ್ಪಟ್ಟಿರುತ್ತದೆ."

❖ಲೀ ಹಂಟ್ :- (What is Poetry) ಎಂಬ ಪ್ರಬಂಧದಲ್ಲಿ ಈ ರೀತಿ ಹೇಳುತ್ತಾನೆ;

❖" Poetry is the utterance of a passion for truth, beauty and power, embodying and illustrating its conceptions by imagination and fancy, and modulating its language on the principle of variety in uniformity. Its means are whatever the universe contains, and its ends pleasure and exaltation."

## ಅರ್ಥಾತ್,

- ‘ಕಾವ್ಯವೆನ್ನುವುದು ಸತ್ಯ, ಸೌಂದರ್ಯ ಮತ್ತು ಸಾಮರ್ಥ್ಯಗಳ ತೀವ್ರ ಅಭೀಪ್ಸೆಗೆ ಕೊಟ್ಟ ವ್ಯಕ್ತರೂಪ. ಪ್ರತಿಭೆ ಮತ್ತು ಕಲ್ಪನೆಗಳ ನೆರವಿನಿಂದ ತನ್ನ ಅನುಭವದ ಪರಿಕಲ್ಪನೆಗಳಿಗೆ ಅದು ರೂಪವನ್ನು ಕೊಡುತ್ತದೆ; ಏಕತೆಯಲ್ಲಿ ವಿವಿಧತೆಯ ಆಧಾರದ ಮೇಲೆ ಭಾಷೆಯನ್ನು ರೂಪುಗೊಳಿಸಿಕೊಳ್ಳುತ್ತದೆ. ಇಡೀ ವಿಶ್ವವೇ ಅದರ ವಸ್ತು; ಆನಂದ ಮತ್ತು ಉದ್ಧಾರವೇ ಅದರ ಗುರಿ.’ ಕಾವ್ಯದ ಧ್ಯೇಯ, ಧೋರಣೆ, ವಸ್ತು-ರೂಪ, ಆಶಯ-ಗುರಿ ಎಲ್ಲವನ್ನೂ ಕಾಣಬಹುದು.

## ಒಟ್ಟಾರೆ.... ಕಾವ್ಯ / ಕವಿತೆ ಎಂದರೆ,..

" ನಮ್ಮ ಭಾವನೆಗಳನ್ನು ತರಂಗಿತಗೊಳಿಸಿ ನಮಗೆ ರಸಾನುಭೂತಿಯನ್ನು ಒದಗಿಸುವ ಛಂದೋಬದ್ಧ ಅಥವಾ ಲಯಬದ್ಧ ಶಾಬ್ದಿಕ ರಚನೆಯೇ ಕವಿತೆ. "

# ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು

1. " ಶಬ್ದಾರ್ಥ ಸಹಿತೌ ಕಾವ್ಯಂ " ಎಂದವರು

ಅ) ಭರತ ಆ) ಭಾಮಹ

ಇ) ದಂಡಿ ಈ) ವಾಮನ

2. " Poetry is the Spontaneous overflow of the powerful feelings " ಎಂಬುದು ಇವರ ವ್ಯಾಖ್ಯಾನವಾಗಿದೆ.

ಅ) ಮ್ಯಾಥ್ಯೂ ಅರ್ನಾಲ್ಡ್ ಆ) ಕಾರ್ಲೆ

ಇ) ವಿಲಿಯಂ ವರ್ಡ್ಸ್ ವರ್ತ್ ಈ) ಶೆಲ್ಲಿ

## ಪರಾಮರ್ಶನ ಸಾಹಿತ್ಯ :

1. ಭಾರತೀಯ ಕಾವ್ಯ ಮೀಮಾಂಸೆ – ತೀ.ನಂ.ಶ್ರೀಕಂಠಯ್ಯ
2. ತೌಲನಿಕ ಕಾವ್ಯ ಮೀಮಾಂಸೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ
3. ಅಂತರ್ಜಾಲ ಮಾಹಿತಿ – ಕನ್ನಡ ವಿಕಿಪೀಡಿಯ